# ಅಧ್ಯಾಯ–I

## ಪರಿಚಯ

# ಅಧ್ಯಾಯ–I

## ಪರಿಚಯ

### 1.1 ಈ ವರದಿಯ ಬಗ್ಗೆ

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ಈ ವರದಿಯು ಆಯ್ದ ಕಾರ್ಯಕ್ರಮಗಳ ಮತ್ತು ಚಟುವಟಿಕೆಗಳ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ ಹಾಗೂ ಸರ್ಕಾರಿ ಇಲಾಖೆಗಳ ಮತ್ತು ಸ್ವಾಯತ್ತ ಸಂಸ್ಥೆಗಳ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ವಿಷಯಗಳಿಗೆ ಸಂಬಂಧಿಸಿದ್ದಾಗಿದೆ.

ಅನುಪಾಲನಾ ಲೆಕ್ಕಪರಿಶೋಧನೆಯು, ಭಾರತ ಸಂವಿಧಾನದ ನಿಬಂಧನೆಗಳು, ಅನ್ವಯಿಸುವ ಕಾನೂನುಗಳು, ನಿಯಮಗಳು, ಕಾಯಿದೆಗಳು, ಸಕ್ಷಮ ಪ್ರಾಧಿಕಾರದಿಂದ ಜಾರಿಯಾದ ಆದೇಶಗಳು ಮತ್ತು ಸೂಚನೆಗಳನ್ನು ಪಾಲಿಸಲಾಗಿದೆಯೇ ಎಂಬುದನ್ನು ತಿಳಿಯಲು ಲೆಕ್ಕಪರಿಶೋಧನೆ ಮಾಡಿದ ಇಲಾಖೆಗಳ ವೆಚ್ಚಕ್ಕೆ ಸಂಬಂಧಿಸಿದ ವಹಿವಾಟುಗಳ ಪರೀಕ್ಷೆಗೆ ಸಂಬಂಧಿಸಿರುತ್ತದೆ. ಮತ್ತೊಂದು ಕಡೆ ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆಯು, ವಹಿವಾಟು ಲೆಕ್ಕಪರಿಶೋಧನೆಯನ್ನು ನಡೆಸುವ ಜೊತೆಗೆ ಕಾರ್ಯಕ್ರಮ/ ಚಟುವಟಿಕೆಯ/ಇಲಾಖೆಯ ಉದ್ದೇಶಗಳನ್ನು ಮಿತವ್ಯಯವಾಗಿ ಮತ್ತು ಕಾರ್ಯಕ್ಷಮತೆಯಿಂದ ಸಾಧಿಸಲಾಯಿತೇ ಎಂಬುದನ್ನೂ ಕೂಡ ಪರಿಶೀಲಿಸುತ್ತದೆ.

ಲೆಕ್ಕಪರಿಶೋಧನೆಯ ಪ್ರಮುಖ ಫಲಿತಾಂಶಗಳನ್ನು ರಾಜ್ಯ ವಿಧಾನಮಂಡಲದ ಗಮನಕ್ಕೆ ತರುವುದು ಈ ವರದಿಯ ಮುಖ್ಯ ಉದ್ದೇಶವಾಗಿದೆ. ವಹಿವಾಟುಗಳ ಸ್ವರೂಪ, ಗಾತ್ರ ಮತ್ತು ಪರಿಮಾಣಕ್ಕೆ ತಕ್ಕಂತೆ ವರದಿ ಮಾಡುವ ರೀತಿಯು ತಕ್ಕ ಪ್ರಮಾಣದಲ್ಲಿರಬೇಕೆಂದು ಲೆಕ್ಕಪರಿಶೋಧನಾ ಮಾನದಂಡಗಳು ನಿಗದಿ ಪಡಿಸುತ್ತವೆ. ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳು ಕಾರ್ಯಾಂಗಕ್ಕೆ ಸರಿಪಡಿಸುವ ಕ್ರಮಗಳನ್ನು ತೆಗೆದುಕೊಳ್ಳುವ ಹಾಗೂ ಸಂಸ್ಥೆಗಳ ಸುಧಾರಿತ ಹಣಕಾಸಿನ ನಿರ್ವಹಣೆಗೆ ಅನುಕೂಲವಾಗುವಂತೆ ಧೋರಣೆಗಳನ್ನು ಮತ್ತು ಮಾರ್ಗದರ್ಶಕಗಳನ್ನು ರಚಿಸುವುದಕ್ಕೆ ಅನುಕೂಲಕರವಾಗಿ ಒಳ್ಳೆಯ ಆಡಳಿತಕ್ಕೆ ಕಾಣಿಕೆ ನೀಡುತ್ತವೆ.

ಈ ಅಧ್ಯಾಯವು ಲೆಕ್ಕಪರಿಶೋಧನೆಯ ಯೋಜನೆ ಮತ್ತು ವ್ಯಾಪ್ತಿಯನ್ನು ವಿವರಿಸುವ ಜೊತೆಗೆ ಆಯ್ದ ಯೋಜನೆಗಳ ಅನುಷ್ಠಾನದಲ್ಲಿನ ಪ್ರಮುಖ ನ್ಯೂನತೆಗಳ ಮತ್ತು ಸಾಧನೆಗಳ, ವಹಿವಾಟುಗಳ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಪ್ರಮುಖ ಲೆಕ್ಕಪರಿಶೋಧನಾ ಅಂಶಗಳ ಮತ್ತು ಹಿಂದಿನ ಲೆಕ್ಕಪರಿಶೋಧನಾ ವರದಿಗಳ ಮೇಲಿನ ಅನುಪಾಲನೆಯ ಸಾರಾಂಶವನ್ನೂ ಒಳಗೊಂಡಿದೆ. ಈ ವರದಿಯ ಎರಡನೇ ಮತ್ತು ಮೂರನೇ ಅಧ್ಯಾಯಗಳು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ ಮತ್ತು ಸರ್ಕಾರಿ ಇಲಾಖೆಗಳ ಮತ್ತು ಸ್ವಾಯತ್ತ ಸಂಸ್ಥೆಗಳ ವಹಿವಾಟುಗಳ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಕಂಡಬಂದ ಅಂಶಗಳನ್ನು ಒಳಗೊಂಡಿವೆ.

### 1.2 ಆಯವ್ಯಯ ಚಿತ್ರಣ

ರಾಜ್ಯದಲ್ಲಿನ 65 ಇಲಾಖೆಗಳು ಸಚಿವಾಲಯ ಮಟ್ಟದಲ್ಲಿ ಮತ್ತು 11 ಸ್ವಾಯತ್ತ ಸಂಸ್ಥೆಗಳು ಸಾಮಾನ್ಯ ಮತ್ತು ಸಾಮಾಜಿಕ ವಲಯ ಸೇವೆಗಳಡಿಯಲ್ಲಿ ಭರಿಸಿದ ವೆಚ್ಚವನ್ನು ಪ್ರಧಾನ ಮಹಾಲೇಖಾಪಾಲರು (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನೆ), ಬೆಂಗಳೂರು ಇವರು ಲೆಕ್ಕಪರಿಶೋಧನೆ ನಡೆಸುತ್ತಾರೆ. ಇಲಾಖೆಗಳಿಗೆ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು ಮುಖ್ಯಸ್ಥರಾಗಿರುತ್ತಾರೆ ಮತ್ತು ನಿರ್ದೇಶಕರು/ಆಯುಕ್ತರು ಮತ್ತು ಅಧೀನ ಅಧಿಕಾರಿಗಳು ಅವರುಗಳಿಗೆ ನೆರವು ನೀಡುತ್ತಾರೆ.

2014–15ರಿಂದ 2018–19ರ ಅವಧಿಯಲ್ಲಿ ರಾಜ್ಯ ಸರ್ಕಾರದ ಆಯವ್ಯಯ ಅಂದಾಜುಗಳು ಮತ್ತು ಅದಕ್ಕೆ ಪ್ರತಿಯಾಗಿ ವಾಸ್ತವಿಕ ವೆಚ್ಚದ ಸ್ಥಿತಿಯನ್ನು **ಕೋಷ್ಟಕ–1.1**ರಲ್ಲಿ ನೀಡಲಾಗಿದೆ.

**ಕೋಷ್ಟಕ–1.1: 2014–15ರಿಂದ 2018–19ರ ಅವಧಿಯಲ್ಲಿ ರಾಜ್ಯದ ಆಯವ್ಯಯ ಮತ್ತು ವಾಸ್ತವಿಕ ವೆಚ್ಚ**

**(₹ ಕೋಟಿಗಳಲ್ಲಿ)**

| ವೆಚ್ಚ | 2014–15 | | 2015–16 | | 2016–17 | | 2017–18 | | 2018–19 | |
|---|---|---|---|---|---|---|---|---|---|---|
| | ಆಯವ್ಯಯ ಅಂದಾಜು | ವಾಸ್ತವ | ಆಯವ್ಯಯ ಅಂದಾಜು | ವಾಸ್ತವ | ಆಯವ್ಯಯ ಅಂದಾಜು | ವಾಸ್ತವ | ಆಯವ್ಯಯ ಅಂದಾಜು | ವಾಸ್ತವ | ಆಯವ್ಯಯ ಅಂದಾಜು | ವಾಸ್ತವ |
| ಸಾಮಾನ್ಯ ಸೇವೆಗಳು | 29,570 | 28,265 | 30,997 | 30,799 | 35,018 | 31,265 | 38,009 | 34,484 | 45,744 | 42,655 |
| ಸಾಮಾಜಿಕ ಸೇವೆಗಳು | 42,117 | 39,366 | 45,728 | 46,307 | 50,960 | 54,549 | 55,887 | 58,652 | 70,226 | 67,935 |
| ಆರ್ಥಿಕ ಸೇವೆಗಳು | 32,399 | 29,971 | 32,175 | 33,846 | 38,277 | 40,421 | 43,671 | 42,856 | 44,152 | 48,285 |
| ಸಹಾಯಾನುದಾನಗಳು ಮತ್ತು ವಂತಿಗೆಗಳು | 6,671 | 6,012 | 6,549 | 6,076 | 5,980 | 5,686 | 7,187 | 6,490 | 6,167 | 5,425 |
| **ಒಟ್ಟು (1)** | **1,10,757** | **1,03,614** | **1,15,449** | **1,17,028** | **1,30,235** | **1,31,921** | **1,44,754** | **1,42,482** | **1,66,289** | **1,64,300** |
| ಬಂಡವಾಳ ವೆಚ್ಚ | 20,014 | 19,622 | 20,564 | 20,713 | 25,716 | 28,150 | 32,033 | 30,667 | 35,246 | 34,659 |
| ಬಟವಾಡೆ ಮಾಡಿದ ಸಾಲಗಳು ಮತ್ತು ಮುಂಗಡಗಳು | 477 | 576 | 733 | 657 | 625 | 1,934 | 1,597 | 5,093 | 5,817 | 4,487 |
| ಸಾರ್ವಜನಿಕ ಋಣ ಮರುಪಾವತಿ | 6,760 | 4,812 | 5,788 | 4,110 | 6,841 | 7,420 | 8,176 | 8,269 | 11,136 | 11,083 |
| ಸಾದಿಲ್ವಾರು ನಿಧಿ | 5 | 0 | 5 | 0 | 5 | 0 | 5 | 0 | 5 | 0 |
| ಸಾರ್ವಜನಿಕ ಲೆಕ್ಕ ಬಟವಾಡೆಗಳು | 2,57,940 | 1,29,574* | 2,83,523 | 1,55,095* | 3,42,036 | 1,67,154* | 5,09,624 | 1,94,537* | 5,10,667 | 2,34,330* |
| ಅಂತಿಮ ಶಿಲ್ಕು | – | 23,901 | – | 27,118 | – | 34,354 | – | 26,184 | – | 22,004 |
| **ಒಟ್ಟು (2)** | **2,85,196** | **1,78,485** | **3,10,613** | **2,07,693** | **3,75,223** | **2,39,012** | **5,51,435** | **2,64,750** | **5,62,871** | **3,06,563** |
| **ಒಟ್ಟು ಮೊತ್ತ (1 + 2)** | **3,95,953** | **14,48,099** | **4,26,062** | **3,24,721** | **5,05,458** | **3,70,933** | **6,96,189** | **4,07,232** | **7,29,160** | **4,70,863** |

* ಹೂಡಿಕೆಗಳನ್ನು ಒಳಗೊಂಡಿಲ್ಲ.

ಆಧಾರ: ವಾರ್ಷಿಕ ಹಣಕಾಸು ತ:ಖ್ತೆಗಳು ಮತ್ತು ಸಂಬಂಧಪಟ್ಟ ವರ್ಷಗಳ ರಾಜ್ಯ ಹಣಕಾಸು ಲೆಕ್ಕಪರಿಶೋಧನಾ ವರದಿಗಳು

## 1.3 ರಾಜ್ಯ ಸರ್ಕಾರದ ಸಂಪನ್ಮೂಲಗಳ ಅನ್ವಯ

₹7,29,160 ಕೋಟಿಗಳ ಒಟ್ಟು ಆಯವ್ಯಯ ವೆಚ್ಚಕ್ಕೆ ಪ್ರತಿಯಾಗಿ 2018–19ರ ಅವಧಿಯಲ್ಲಿ ಸಂಪನ್ಮೂಲಗಳ ಅನ್ವಯವು ₹4,70,863 ಕೋಟಿಯಿದ್ದಿತು. ರಾಜ್ಯದ ಒಟ್ಟು ವೆಚ್ಚವು (ರಾಜಸ್ವ ವೆಚ್ಚ, ಬಂಡವಾಳ ವೆಚ್ಚ ಹಾಗೂ ಸಾಲ ಮತ್ತು ಮುಂಗಡಗಳು) 2014–15 ರಿಂದ 2018–19ರ ಅವಧಿಯಲ್ಲಿ ₹1,23,812 ಕೋಟಿಯಿಂದ ₹2,03,446 ಕೋಟಿಗೆ ಶೇಕಡಾ 64ರಷ್ಟು ಏರಿಕೆಯಾಗಿತ್ತು ಮತ್ತು ರಾಜಸ್ವ ವೆಚ್ಚವು ಇದೇ ಅವಧಿಯಲ್ಲಿ ₹1,03,614 ಕೋಟಿಯಿಂದ ₹1,64,300 ಕೋಟಿಗೆ ಶೇಕಡಾ 59ರಷ್ಟು ಏರಿಕೆಯಾಗಿತ್ತು. ರಾಜಸ್ವ ವೆಚ್ಚವು ಒಟ್ಟು ವೆಚ್ಚದ ಶೇಕಡಾ 80ರಿಂದ 85ರಷ್ಟಿದ್ದರೆ, 2014–15ರಿಂದ 2018–19ರ ಅವಧಿಯಲ್ಲಿ ಬಂಡವಾಳ ವೆಚ್ಚವು ಶೇಕಡಾ 15ರಿಂದ 17ರಷ್ಟಿತ್ತು.

2014–15ರಿಂದ 2018–19ರ ಅವಧಿಯಲ್ಲಿ, ಒಟ್ಟು ವೆಚ್ಚವು ವಾರ್ಷಿಕ ಸರಾಸರಿ ಶೇಕಡಾ 13ರಷ್ಟು ಏರಿಕೆಯಾಗಿದ್ದರೆ ರಾಜಸ್ವ ಸ್ವೀಕೃತಿಗಳು ವಾರ್ಷಿಕ ಸರಾಸರಿ ಬೆಳವಣಿಗೆಯ ಶೇಕಡಾ 12ರಷ್ಟು ಏರಿದ್ದವು.

## 1.4 ಸತತ ಉಳಿತಾಯಗಳು

ಕಳೆದ ಐದು ವರ್ಷಗಳಲ್ಲಿ, 10 ಅನುದಾನಗಳು ₹10 ಕೋಟಿಗಿಂತ ಹೆಚ್ಚಿನ ಉಳಿತಾಯವನ್ನು ತೋರಿಸಿದ್ದವು ಮತ್ತು ಇದು **ಕೋಷ್ಟಕ–1.2**ರಲ್ಲಿ ವಿವರಿಸಿರುವಂತೆ, ಒಟ್ಟು ಅನುದಾನಗಳಿಗಿಂತ ಶೇಕಡಾ ಐದು ಅಥವಾ ಅದಕ್ಕಿಂತ ಹೆಚ್ಚಿನದಾಗಿದ್ದವು.

**ಕೋಷ್ಟಕ–1.2: ಸತತ ಉಳಿತಾಯಗಳನ್ನು ತೋರಿಸುವ ಅನುದಾನಗಳು**

**(₹ ಕೋಟಿಗಳಲ್ಲಿ)**

| ಕ್ರಮ ಸಂಖ್ಯೆ | ಅನುದಾನದ ಸಂಖ್ಯೆ ಮತ್ತು ಹೆಸರು | ಉಳಿತಾಯದ ಮೊತ್ತ | | | | |
|---|---|---|---|---|---|---|
| | | 2014–15 | 2015–16 | 2016–17 | 2017–18 | 2018–19 |
| **ರಾಜಸ್ವ (ಪುರಸ್ಕೃತ)** | | | | | | |
| 1 | 1–ಕೃಷಿ ಮತ್ತು ತೋಟಗಾರಿಕೆ | 1,580.11<br>(26) | 803.18<br>(14) | 653.97<br>(10) | 455.50<br>(7) | 1,340.72<br>(17) |
| 2 | 4–ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗಳು | 380.37<br>(35) | 90.20<br>(16) | 143.15<br>(22) | 107.10<br>(14) | 165.93<br>(13) |
| 3 | 22–ಆರೋಗ್ಯ ಮತ್ತು ಕುಟುಂಬ ಕಲ್ಯಾಣ | 968.97<br>(16) | 904.50<br>(15) | 605.01<br>(9) | 403.91<br>(6) | 427.44<br>(5) |
| 4 | 23–ಕಾರ್ಮಿಕ ಮತ್ತು ಕೌಶಲ್ಯ ಅಭಿವೃದ್ಧಿ | 260.82<br>(33) | 126.72<br>(13) | 111.37<br>(12) | 606.35<br>(36) | 204.81<br>(16) |
| 5 | 25–ಕನ್ನಡ ಮತ್ತು ಸಂಸ್ಕೃತಿ | 70.40<br>(23) | 20.22<br>(6) | 35.62<br>(11) | 38.89<br>(10) | 82.02<br>(26) |
| 6 | 27–ಕಾನೂನು | 69.78<br>(11) | 45.28<br>(7) | 72.89<br>(11) | 79.63<br>(10) | 59.28<br>(6) |
| 7 | 28–ಸಂಸದೀಯ ವ್ಯವಹಾರಗಳು ಮತ್ತು ಶಾಸನ | 23.12<br>(14) | 28.94<br>(16) | 24.82<br>(14) | 59.21<br>(25) | 34.33<br>(18) |
| **ರಾಜಸ್ವ (ಪ್ರಭೃತ)** | | | | | | |
| 8 | 4– ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗಳು | 28.44<br>(14) | 16.24<br>(7) | 23.05<br>(10) | 24.34<br>(9) | 22.67<br>(15) |
| **ಬಂಡವಾಳ (ಪುರಸ್ಕೃತ)** | | | | | | |
| 9 | 3–ಹಣಕಾಸು | 12.53<br>(13) | 67.61<br>(46) | 37.97<br>(33) | 38.54<br>(30) | 34.52<br>(30) |
| 10 | 11–ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 48.73<br>(41) | 64.19<br>(13) | 49.91<br>(26) | 21.56<br>(11) | 71.55<br>(44) |

ಟಿಪ್ಪಣಿ: ಕಂಸದಲ್ಲಿರುವ ಸಂಖ್ಯೆಗಳು ಒಟ್ಟು ಅವಕಾಶಕ್ಕೆ ಉಳಿತಾಯದ ಶೇಕಡಾವಾರನ್ನು ಸೂಚಿಸುತ್ತವೆ.

ಆಧಾರ: ಸಂಬಂಧಪಟ್ಟ ವರ್ಷಗಳ ಧನವಿನಿಯೋಗ ಲೆಕ್ಕಗಳು

## 1.5 ಭಾರತ ಸರ್ಕಾರದಿಂದ ಸಹಾಯಾನುದಾನಗಳು

**ಕೋಷ್ಟಕ–1.3**ರಲ್ಲಿ ತೋರಿಸಿರುವಂತೆ ಹಿಂದಿನ ವರ್ಷಗಳಿಗೆ ಹೋಲಿಸಿದರೆ 2016–17ರಿಂದ 2018–19ರ ಅವಧಿಯಲ್ಲಿ ಭಾರತ ಸರ್ಕಾರದಿಂದ ಸ್ವೀಕರಿಸಿದ ಸಹಾಯಾನುದಾನಗಳು ಏರಿಕೆಯ ಪ್ರವೃತ್ತಿಯನ್ನು ತೋರಿಸಿದವು.

**ಕೋಷ್ಟಕ-1.3: ಭಾರತ ಸರ್ಕಾರದಿಂದ ಸ್ವೀಕರಿಸಿದ ಸಹಾಯಾನುದಾನಗಳು**

(₹ ಕೋಟಿಗಳಲ್ಲಿ)

| ವಿವರಗಳು | 2014-15 | 2015-16 | 2016-17 | 2017-18 | 2018-19 |
|---|---|---|---|---|---|
| ಯೋಜನೇತರ ಅನುದಾನಗಳು | 3,635 | 5,548 | 7,045 | – | – |
| ರಾಜ್ಯ ಯೋಜನೆಗಳಿಗೆ ಅನುದಾನಗಳು | 9,097 | 8,105 | 8,102 | – | – |
| ಕೇಂದ್ರ ಯೋಜನೆಗಳಿಗೆ ಅನುದಾನಗಳು | 159 | 139 | 116 | – | – |
| ಕೇಂದ್ರ ಪುರಸ್ಕೃತ ಯೋಜನೆಗಳಿಗೆ ಅನುದಾನಗಳು | 1,729 | 137 | 440 | 11,617 | 10,393 |
| ಇತರ ವರ್ಗಾವಣೆಗಳು/ರಾಜ್ಯಗಳಿಗೆ ಅನುದಾನಗಳು | – | – | – | 7,316 | 11,714 |
| ಹಣಕಾಸು ಆಯೋಗದ ಅನುದಾನಗಳು | – | – | – | 2,708 | 3,374 |
| **ಒಟ್ಟು** | **14,620** | **13,929** | **15,703** | **21,641** | **25,481** |

## 1.6 ಲೆಕ್ಕಪರಿಶೋಧನೆಗೆ ಅಧ್ಯಾದೇಶ

ಭಾರತ ಸಂವಿಧಾನದ 149 ಮತ್ತು 151ನೇ ಅನುಚ್ಛೇದಗಳಡಿ ಹಾಗೂ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ (ಕರ್ತವ್ಯಗಳು, ಅಧಿಕಾರಗಳು ಮತ್ತು ಸೇವಾ ಷರತ್ತುಗಳು) ಅಧಿನಿಯಮ, 1971 [ಸಿಎಜಿರವರ (ಡಿಪಿಸಿ) ಅಧಿನಿಯಮ] ಇದರಡಿ ಸಿಎಜಿಯವರು ಲೆಕ್ಕಪರಿಶೋಧನೆಗಾಗಿ ಅಧ್ಯಾದೇಶವನ್ನು ಪಡೆಯುತ್ತಾರೆ. ಸಿಎಜಿರವರು ಸದರಿ ಅಧಿನಿಯಮದ ಪರಿಚ್ಛೇದ 13ರ[1] ಅಡಿಯಲ್ಲಿ ಕರ್ನಾಟಕ ಸರ್ಕಾರದ ಇಲಾಖೆಗಳ ವೆಚ್ಚದ ಲೆಕ್ಕಪರಿಶೋಧನೆಯನ್ನು ನಡೆಸುತ್ತಾರೆ. ಅಧಿನಿಯಮದ ಪರಿಚ್ಛೇದ 19(2)[2] ಮತ್ತು 19(3)[3] ರಡಿಯಲ್ಲಿ ಲೆಕ್ಕಪರಿಶೋಧನೆ ನಡೆಸುವ 11 ಸ್ವಾಯತ್ತ ಸಂಸ್ಥೆಗಳಿಗೆ ಸಿಎಜಿಯವರೇ ಲೆಕ್ಕಪರಿಶೋಧಕರಾಗಿರುತ್ತಾರೆ. ಇದಲ್ಲದೇ, ಅಧಿನಿಯಮದ ಪರಿಚ್ಛೇದ 14[4] ರಡಿಯಲ್ಲಿ ಸರ್ಕಾರದಿಂದ ಬಹುಪಾಲು ಹಣ ಪಡೆಯುವ 298 ಇತರ ಸ್ವಾಯತ್ತ ಸಂಸ್ಥೆಗಳ ಲೆಕ್ಕಪರಿಶೋಧನೆಯನ್ನೂ ಸಹ ಸಿಎಜಿರವರು ನಡೆಸುತ್ತಾರೆ. ಹಲವಾರು ಲೆಕ್ಕಪರಿಶೋಧನೆಗಳಿಗೆ ತತ್ವಗಳನ್ನು ಮತ್ತು ವಿಧಾನಗಳನ್ನು ಸಿಎಜಿರವರು ಜಾರಿ ಮಾಡಿರುವ ಲೆಕ್ಕಪರಿಶೋಧನಾ ಮಾನದಂಡಗಳು ಮತ್ತು ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರಗಳು, 2007ರ ಕಾಯಿದೆಗಳಲ್ಲಿ ನಿಗದಿಪಡಿಸಲಾಗಿದೆ.

[1] (i) ರಾಜ್ಯದ ಸಂಚಿತ ನಿಧಿಯಿಂದ ಆಗುವ ಎಲ್ಲ ವಹಿವಾಟುಗಳ (ii) ಸಾದಿಲ್ವಾರು ನಿಧಿಗೆ ಮತ್ತು ಸಾರ್ವಜನಿಕ ಲೆಕ್ಕಕ್ಕೆ ಸಂಬಂಧಿಸಿದ ವಹಿವಾಟುಗಳು ಮತ್ತು (iii) ಎಲ್ಲ ವ್ಯಾಪಾರ, ತಯಾರಿಕೆ, ಲಾಭ ಮತ್ತು ನಷ್ಟದ ಲೆಕ್ಕಗಳು, ಅಥಾವೆ ಪಟ್ಟಿಕೆ (ಬ್ಯಾಲೆನ್ಸ್ ಶೀಟ್) ಮತ್ತು ಇತರ ಅಧೀನ ಲೆಕ್ಕಗಳು.

[2] ಸಂಬಂಧಪಟ್ಟ ಶಾಸನದ ನಿಬಂಧನೆಗಳ ಪ್ರಕಾರ ಸಂಸತ್ತಿನ ನಿಯಮದಿಂದ ರಚಿತವಾಗಿರುವ ನಿಗಮಗಳ (ಕಂಪನಿಗಳಲ್ಲದ) ಲೆಕ್ಕಪತ್ರಗಳ ಲೆಕ್ಕಪರಿಶೋಧನೆ.

[3] ರಾಜ್ಯ ವಿಧಾನಮಂಡಲದ ಶಾಸನ ನಿಬಂಧನೆಗಳ ಪ್ರಕಾರ ರಾಜ್ಯಪಾಲರ ಕೋರಿಕೆಯ ಮೇರೆಗೆ ಯಾವುದೇ ಸಂಸ್ಥೆ ಅಥವಾ ಪ್ರಾಧಿಕಾರದ ಲೆಕ್ಕಪತ್ರಗಳ ಲೆಕ್ಕಪರಿಶೋಧನೆ.

[4] (i) ರಾಜ್ಯದ ಸಂಚಿತ ನಿಧಿಯಿಂದ ಅನುದಾನಗಳು ಅಥವಾ ಸಾಲಗಳ ಮುಖಾಂತರ ಬಹುಮಟ್ಟಿಗೆ ಹಣಕಾಸು ಒದಗಿಸುವ ಸಂಸ್ಥೆ/ಪ್ರಾಧಿಕಾರದ ಎಲ್ಲ ಜಮೆ ಮತ್ತು ವೆಚ್ಚದ ಲೆಕ್ಕಪರಿಶೋಧನೆ (iii) ರಾಜ್ಯದ ಸಂಚಿತ ನಿಧಿಯಿಂದ ₹ಒಂದು ಕೋಟಿಗೂ ಕಡಿಮೆಯಿಲ್ಲದಂತೆ ಅನುದಾನ ಅಥವಾ ಸಾಲ ಪಡೆಯುವ ಯಾವುದೇ ಸಂಸ್ಥೆ ಅಥವಾ ಪ್ರಾಧಿಕಾರದ ಎಲ್ಲ ಜಮೆ ಮತ್ತು ವೆಚ್ಚಗಳ ಲೆಕ್ಕಪರಿಶೋಧನೆ.

## 1.7 ಪ್ರಧಾನ ಮಹಾಲೇಖಾಪಾಲರು (ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನೆ), ಕರ್ನಾಟಕ, ಬೆಂಗಳೂರು, ಕಛೇರಿಯ ಸಾಂಸ್ಥಿಕ ರಚನೆ

ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರ ನಿರ್ದೇಶನಗಳ ಮೇರೆಗೆ ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–1) ಬೆಂಗಳೂರು, ಇವರು ರಾಜ್ಯದೆಲ್ಲೆಡೆ ಇರುವ ಸಾಮಾನ್ಯ ಮತ್ತು ಸಾಮಾಜಿಕ ವಲಯದಡಿಯಲ್ಲಿನ ಸರ್ಕಾರಿ ಇಲಾಖೆಗಳ/ಕಛೇರಿಗಳ/ಸ್ವಾಯತ್ತ ನಿಕಾಯಗಳ/ ಸಂಸ್ಥೆಗಳ ಲೆಕ್ಕಪರಿಶೋಧನೆಯನ್ನು ನಡೆಸುತ್ತಾರೆ. ಮಹಾಲೇಖಾಪಾಲರಿಗೆ ಮೂವರು ಉಪ ಮಹಾಲೇಖಾಪಾಲರುಗಳು ಮತ್ತು ಅಧೀನ ಅಧಿಕಾರಿಗಳು ನೆರವು ನೀಡುತ್ತಾರೆ.

## 1.8 ಲೆಕ್ಕಪರಿಶೋಧನೆಯ ಯೋಜನೆ ಮತ್ತು ನಿರ್ವಹಣೆ

ಸರ್ಕಾರದ ಹಲವಾರು ಇಲಾಖೆಗಳು ಎದುರಿಸುವ ಸಂಭವನೀಯ ಅಪಾಯ ಮತ್ತು ಭರಿಸಿದ ವೆಚ್ಚ, ಚಟುವಟಿಕೆಗಳ ವಿಮರ್ಶಕತ್ವ/ಸಂಕೀರ್ಣತೆ, ನೀಡಿದ ಹಣಕಾಸಿನ ಅಧಿಕಾರಗಳು, ಒಟ್ಟಾರೆ ಆಂತರಿಕ ನಿಯಂತ್ರಣಗಳ ನಿರ್ಧಾರಣೆ ಮತ್ತು ಹಿತಾಸಕ್ತಿಯುಳ್ಳವರ ಕಳಕಳಿಯ ಮೇಲೆ ನಿರ್ಧರಿಸಿ ಲೆಕ್ಕಪರಿಶೋಧನಾ ಪ್ರಕ್ರಿಯೆಯನ್ನು ಪ್ರಾರಂಭಿಸಲಾಗುತ್ತದೆ. ಈ ವಿಧಾನದಲ್ಲಿ ಹಿಂದಿನ ಲೆಕ್ಕಪರಿಶೋಧನಾ ಅಂಶಗಳನ್ನೂ ಸಹ ಪರಿಗಣಿಸಲಾಗುತ್ತದೆ. ಅಪಾಯದ ಸಂಭವನೀಯತೆಯ ಆಧಾರದ ಮೇಲೆ ಲೆಕ್ಕಪರಿಶೋಧನೆಯ ಕಾಲಾವಧಿ ಮತ್ತು ವ್ಯಾಪ್ತಿಯನ್ನು ನಿರ್ಧರಿಸಲಾಗುವುದು.

ಪ್ರತಿಯೊಂದು ಘಟಕದ ಲೆಕ್ಕಪರಿಶೋಧನೆಯ ನಂತರ ಲೆಕ್ಕಪರಿಶೋಧನೆಯಲ್ಲಿ ಕಂಡುಬಂದ ಅಂಶಗಳನ್ನು ಒಳಗೊಂಡ ತಪಾಸಣಾ ವರದಿಗಳನ್ನು ಇಲಾಖೆಯ ಮುಖ್ಯಸ್ಥರಿಗೆ ಕಳುಹಿಸಲಾಗುತ್ತದೆ. ತಪಾಸಣಾ ವರದಿಗಳು ಸ್ವೀಕೃತಗೊಂಡ ಒಂದು ತಿಂಗಳೊಳಗಾಗಿ ಲೆಕ್ಕಪರಿಶೋಧನಾ ಅಂಶಗಳಿಗೆ ಉತ್ತರಗಳನ್ನು ಸಲ್ಲಿಸಲು ಇಲಾಖೆಗಳನ್ನು ಕೋರಲಾಗುತ್ತದೆ. ಉತ್ತರಗಳನ್ನು ಸ್ವೀಕರಿಸಿದಾಗ ಲೆಕ್ಕಪರಿಶೋಧನಾ ಅಂಶಗಳನ್ನು ಇತ್ಯರ್ಥಗೊಳಿಸಲಾಗುವುದು ಅಥವಾ ಅನುಪಾಲನೆಗಾಗಿ ಮುಂದಿನ ಕ್ರಮವನ್ನು ತೆಗೆದುಕೊಳ್ಳಲು ಸಲಹೆ ನೀಡಲಾಗುವುದು. ಈ ತಪಾಸಣಾ ವರದಿಗಳಲ್ಲಿನ ಪ್ರಮುಖ ಲೆಕ್ಕಪರಿಶೋಧನಾ ಅಂಶಗಳನ್ನು, ಭಾರತ ಸಂವಿಧಾನದ ಅನುಚ್ಛೇದ 151ರಡಿಯಲ್ಲಿ ವಿಧಾನ ಮಂಡಲದಲ್ಲಿ ಮಂಡಿಸುವ ಸಲುವಾಗಿ ರಾಜ್ಯಪಾಲರಿಗೆ ಸಲ್ಲಿಸಲಾಗುವ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಲು ಸಂಸ್ಕರಿಸಲಾಗುವುದು.

2018–19ರ ಅವಧಿಯಲ್ಲಿ ಸಾಮಾನ್ಯ ಮತ್ತು ಸಾಮಾಜಿಕ ವಲಯ ಲೆಕ್ಕಪರಿಶೋಧನಾ ವಿಭಾಗದಲ್ಲಿ 3,869 ತಂಡ ದಿನಗಳನ್ನು ಬಳಸಿ 366 ಘಟಕಗಳನ್ನು ಮತ್ತು ಒಂದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ ಮತ್ತು ಎರಡು ಅನುಪಾಲನಾ ಲೆಕ್ಕಪರಿಶೋಧನೆಗಳನ್ನು ನಡೆಸಲಾಯಿತು.

## 1.9 ಪ್ರಮುಖ ಲೆಕ್ಕಪರಿಶೋಧನಾ ಅಭಿಪ್ರಾಯಗಳು ಮತ್ತು ಲೆಕ್ಕಪರಿಶೋಧನೆಗೆ ಪ್ರತಿಕ್ರಿಯೆ

ಕಳೆದ ಕೆಲವು ವರ್ಷಗಳಲ್ಲಿ ಕಾರ್ಯನಿರ್ವಹಣಾ ಸಮೀಕ್ಷೆಗಳ ಮೂಲಕ ಹಲವಾರು ಕಾರ್ಯಕ್ರಮಗಳ/ ಚಟುವಟಿಕೆಗಳ ಅನುಷ್ಠಾನದಲ್ಲಿನ ಪ್ರಮುಖ ನ್ಯೂನತೆಗಳನ್ನು ಮತ್ತು ಕಾರ್ಯಕ್ರಮಗಳ ಸಫಲತೆಯ ಹಾಗೂ ಇಲಾಖೆಗಳ ಕಾರ್ಯಕ್ಷಮತೆಯ ಮೇಲೆ ಪರಿಣಾಮ ಬೀರುವ ಆಯ್ದ ಇಲಾಖೆಗಳಲ್ಲಿನ ಆಂತರಿಕ ನಿಯಂತ್ರಣಗಳ ಗುಣಮಟ್ಟದ ಬಗ್ಗೆ ಲೆಕ್ಕಪರಿಶೋಧನೆಯು ವರದಿ ಮಾಡಿದೆ. ಅದೇ ರೀತಿ ಸರ್ಕಾರಿ ಇಲಾಖೆಗಳ/ಸಂಸ್ಥೆಗಳ ವಹಿವಾಟುಗಳ ಅನುಪಾಲನಾ ಲೆಕ್ಕಪರಿಶೋಧನೆಯಲ್ಲಿ ಗಮನಿಸಿದ ನ್ಯೂನತೆಗಳನ್ನೂ ಸಹ ವರದಿ ಮಾಡಲಾಗಿದೆ.

ಈ ವರದಿಯಲ್ಲಿ ಸೇರಿಸಿರುವ ಒಂದು ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ ಹಾಗೂ 17 ಕರಡು ಕಂಡಿಕೆಗಳನ್ನು ಅರೆ–ಸರ್ಕಾರಿ ಪತ್ರದ ಮುಖಾಂತರ ಸಂಬಂಧಿತ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳಿಗೆ, ಆರು ವಾರಗಳೊಳಗೆ ಅವರ ಪ್ರತಿಕ್ರಿಯೆಯನ್ನು ನೀಡುವಂತೆ ಕೋರಿ, ಜುಲೈ 2019 ಮತ್ತು ಡಿಸೆಂಬರ್ 2019ರ ನಡುವೆ ಕಳುಹಿಸಲಾಯಿತು. ಕಾರ್ಯನಿರ್ವಹಣಾ ಲೆಕ್ಕಪರಿಶೋಧನೆ ಹಾಗೂ ಎಲ್ಲ ಕಂಡಿಕೆಗಳಿಗೆ ಸರ್ಕಾರದ ಉತ್ತರಗಳನ್ನು ಸ್ವೀಕರಿಸಲಾಗಿದೆ. ಉತ್ತರಗಳನ್ನು ವರದಿಯಲ್ಲಿ ಸಮರ್ಪಕವಾಗಿ ಅಳವಡಿಸಲಾಗಿದೆ.

## 1.10 ಲೆಕ್ಕಪರಿಶೋಧನೆಗೆ ಸರ್ಕಾರದ ಪ್ರತಿಕ್ರಿಯೆ

### *1.10.1 ಬಾಕಿ ಇರುವ ತಪಾಸಣಾ ವರದಿಗಳು*

ಲೆಕ್ಕಪರಿಶೋಧನಾ ಅಭಿಪ್ರಾಯಗಳ ತ್ವರಿತಗತಿಯ ಇತ್ಯರ್ಥಕ್ಕಾಗಿ ಆರ್ಥಿಕ ಇಲಾಖೆಯಿಂದ 2001ರಲ್ಲಿ ಹೊರಡಿಸಲ್ಪಟ್ಟಿರುವ ಸೂಚನೆಗಳ ಕೈಪಿಡಿಯು ನಿಗದಿಪಡಿಸಿದ ನಿಯಮಗಳು ಮತ್ತು ಕಾರ್ಯವಿಧಾನಗಳ ಅನುಸರಣೆಯಿಂದ ಸರಿಪಡಿಕೆ ಕ್ರಮಗಳ ಮತ್ತು ತಪಾಸಣೆಯಲ್ಲಿ ಗಮನಿಸಿದ ನ್ಯೂನತೆಗಳು, ಲೋಪಗಳು, ಮುಂತಾದವುಗಳಿಗಾಗಿ ಹೊಣೆಗಾರಿಕೆಯನ್ನು ಖಾತರಿಪಡಿಸಿಕೊಳ್ಳಲು ಮಹಾಲೇಖಾಪಾಲರಿಂದ ನೀಡಲ್ಪಟ್ಟ ತಪಾಸಣಾ ವರದಿಗಳಿಗೆ (ಐಆರ್) ಕಾರ್ಯಾಂಗದಿಂದ ಚುರುಕಾದ ಪ್ರತಿಕ್ರಿಯೆಗಾಗಿ ಉಪಬಂಧಿಸುತ್ತವೆ. ಕಛೇರಿಗಳ ಮುಖ್ಯಸ್ಥರುಗಳು ಮತ್ತು ನಂತರದ ಮೇಲಧಿಕಾರಿಗಳು ಐಆರ್‌ಗಳಲ್ಲಿರುವ ಅಭಿಪ್ರಾಯಗಳನ್ನು ಅನುಪಾಲಿಸಬೇಕು, ಲೋಪದೋಷಗಳನ್ನು ಸರಿಪಡಿಸಬೇಕು ಮತ್ತು ಎಜಿಯವರಿಗೆ ವರದಿಯನ್ನು ಕಳುಹಿಸಬೇಕು. ಅವರು ಲೆಕ್ಕಪರಿಶೋಧನಾ ಅಭಿಪ್ರಾಯಗಳ ಮೇಲ್ವಿಚಾರಣೆಗೆ ಅನುವಾಗಲು ಬಾಕಿ ಇರುವ ತಪಾಸಣಾ ವರದಿಗಳ ಅರ್ಧವಾರ್ಷಿಕ ವರದಿಯೊಂದನ್ನು ಇಲಾಖೆಯ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾರೆ.

31 ಮಾರ್ಚ್ 2019ರಲ್ಲಿದ್ದಂತೆ ಎಲ್ಲ ಇಲಾಖೆಗಳ ಪ್ರತಿಯಾಗಿ 3,437 ತಪಾಸಣಾ ವರದಿಗಳು (18,232 ಕಂಡಿಕೆಗಳು) ಬಾಕಿ ಉಳಿದಿದ್ದವು. ಬಾಕಿಯ ವರ್ಷಾವಾರು ವಿವರಗಳನ್ನು **ಕೋಷ್ಟಕ–1.4**ರಲ್ಲಿ ನೀಡಲಾಗಿದೆ.

**ಕೋಷ್ಟಕ–1.4: ತಪಾಸಣಾ ವರದಿಗಳು ಮತ್ತು ಕಂಡಿಕೆಗಳ ಬಾಕಿಯ ವರ್ಷಾವಾರು ವಿವರಗಳು**

| ಕ್ರಮ ಸಂಖ್ಯೆ | ವರ್ಷಗಳು | ತಪಾಸಣಾ ವರದಿಗಳ ಸಂಖ್ಯೆ | ಕಂಡಿಕೆಗಳ ಸಂಖ್ಯೆ |
|---|---|---|---|
| 1 | ಒಂದು ವರ್ಷಕ್ಕಿಂತ ಕಡಿಮೆ | 82 | 640 |
| 2 | 1ರಿಂದ 2 ವರ್ಷಗಳು | 511 | 4,623 |
| 3 | 2ರಿಂದ 5 ವರ್ಷಗಳು | 1,308 | 8,175 |
| 4 | 6ರಿಂದ 10 ವರ್ಷಗಳು | 863 | 3,226 |
| 5 | 10 ವರ್ಷಗಳಿಗೂ ಅಧಿಕ | 673 | 1,568 |
| **ಒಟ್ಟು** | | **3,437** | **18,232** |

ಆಧಾರ: ಪ್ರಧಾನ ಮಹಾಲೇಖಾಪಾಲರ (ಲೆಕ್ಕಪರಿಶೋಧನೆ–1) ಕಛೇರಿಯಲ್ಲಿ ನಿರ್ವಹಿಸಿರುವ ಸಾರ್ವಜನಿಕ ಲೆಕ್ಕಪತ್ರ ಇಲಾಖಾ ವಾಚ್ ರಿಜಿಸ್ಟರ್‌ಗಳಿಂದ ಪಡೆದುಕೊಂಡ ಮಾಹಿತಿ

ಮಾರ್ಚ್ 2019ರ ಅಂತ್ಯದವರೆಗೆ ಜಾರಿ ಮಾಡಲಾಗಿದ್ದ ಬಾಕಿ ಉಳಿದಿರುವ ಐಆರ್‌ಗಳ ಸಮೀಕ್ಷೆಯು ಬಾಕಿ ಉಳಿದಿದ್ದ ಒಟ್ಟು ತಪಾಸಣಾ ವರದಿಗಳ ಶೇಕಡಾ 2ರಷ್ಟು ಅಂದರೆ 82 ತಪಾಸಣಾ ವರದಿಗಳು (640 ಕಂಡಿಕೆಗಳು) ಒಂದು ವರ್ಷಕ್ಕೂ ಕಡಿಮೆ ಅವಧಿಗೆ ಬಾಕಿ ಉಳಿದಿದ್ದವು, 2,682 ತಪಾಸಣಾ ವರದಿಗಳು (16,024 ಕಂಡಿಕೆಗಳು) ಒಂದು ವರ್ಷಕ್ಕೂ ಅಧಿಕವಾಗಿ ಆದರೆ 10 ವರ್ಷಕ್ಕೂ ಕಡಿಮೆ ಅವಧಿಗೆ ಬಾಕಿ ಉಳಿದಿದ್ದವು ಎಂಬುದನ್ನು ತೋರಿಸಿತು. ಆದರೆ, ಶೇಕಡಾ 20ರಷ್ಟು ತಪಾಸಣಾ ವರದಿಗಳು ಅಂದರೆ 673 ತಪಾಸಣಾ ವರದಿಗಳು (1,568 ಕಂಡಿಕೆಗಳು) 10 ವರ್ಷಗಳಿಗೂ ಅಧಿಕ ಅವಧಿಗೆ ಬಾಕಿ ಉಳಿದಿದ್ದವು.

ಮುಂದುವರೆದು, 10 ವರ್ಷಗಳಿಗೂ ಅಧಿಕವಾಗಿ ಬಾಕಿ ಇರುವ ತಪಾಸಣಾ ವರದಿಗಳ ಸಮೀಕ್ಷೆಯು ಕಂದಾಯ ಮತ್ತು ಕರ್ನಾಟಕ ನ್ಯಾಯಾಂಗ ಇಲಾಖೆಗಳು ಅನುಕ್ರಮವಾಗಿ 110 ಮತ್ತು 75ರಷ್ಟು ಅಧಿಕ ಸಂಖ್ಯೆಯ ತಪಾಸಣಾ ವರದಿಗಳನ್ನು ಬಾಕಿ ಉಳಿಸಿಕೊಂಡಿದ್ದವೆಂದು ಪ್ರಕಟಪಡಿಸಿತು. ಬಾಕಿ ಇರುವ ತಪಾಸಣಾ ವರದಿಗಳ ಮತ್ತು ಕಂಡಿಕೆಗಳ ವರ್ಷಾವಾರು ಮತ್ತು ಇಲಾಖಾವಾರು ವಿವರಗಳನ್ನು **ಅನುಬಂಧ–1.1**ರಲ್ಲಿ ನೀಡಲಾಗಿದೆ.

### *1.10.2 ಲೆಕ್ಕಪರಿಶೋಧನಾ ವರದಿಗಳ ಮೇಲೆ ಅನುಸರಣಾ ಕ್ರಮ*

ಕೈಪಿಡಿ ಹಾಗೂ ಸಾರ್ವಜನಿಕ ಲೆಕ್ಕಪತ್ರ ಸಮಿತಿಯ ಕಾರ್ಯವಿಧಾನ ನಿಯಮಾವಳಿಗಳು (ಆಂತರಿಕ ವ್ಯವಹಾರ), 1999, ಸರ್ಕಾರದ ಎಲ್ಲ ಇಲಾಖೆಗಳಿಂದ ಲೆಕ್ಕಪರಿಶೋಧನಾ ವರದಿಗಳಲ್ಲಿ ನಿರೂಪಿಸಲಾದ ಅಭಿಪ್ರಾಯಗಳಿಗೆ ಕ್ರಮ ತೆಗೆದುಕೊಂಡ ಟಿಪ್ಪಣಿಗಳ (ಎಟಿಎನ್‌ಗಳ) ರೂಪದಲ್ಲಿ ವಿವರವಾದ ಸ್ಪಷ್ಟೀಕರಣಗಳನ್ನು ಅವು ವಿಧಾನಮಂಡಲದಲ್ಲಿ ಮಂಡನೆಯಾದ ನಾಲ್ಕು ತಿಂಗಳುಗಳ ಒಳಗಾಗಿ ಲೆಕ್ಕಪರಿಶೋಧನಾ ಕಛೇರಿಗೆ ಅವುಗಳ ಪ್ರತಿಗಳೊಂದಿಗೆ ಕರ್ನಾಟಕ ವಿಧಾನಮಂಡಲದ ಸಚಿವಾಲಯಕ್ಕೆ ಸಲ್ಲಿಸಬೇಕೆಂದು ಉಪಬಂಧಿಸುತ್ತವೆ.

ಆಡಳಿತ ಇಲಾಖೆಗಳು ಈ ಸೂಚನೆಗಳನ್ನು ಪಾಲಿಸಲಿಲ್ಲ ಮತ್ತು **ಕೋಷ್ಟಕ–1.5**ರಲ್ಲಿ ವಿವರಿಸಿರುವಂತೆ ಏಳು ಇಲಾಖೆಗಳು, 31 ಡಿಸೆಂಬರ್ 2019ರಲ್ಲಿದ್ದಂತೆ 2011–12ರಿಂದ 2017–18ರ ಅವಧಿಯ 14 ಕಂಡಿಕೆಗಳಿಗೆ ಕ್ರಮ ತೆಗೆದುಕೊಂಡ ಟಿಪ್ಪಣಿಗಳನ್ನು ಸಲ್ಲಿಸಿರಲಿಲ್ಲ.

**ಕೋಷ್ಟಕ–1.5: 31 ಡಿಸೆಂಬರ್ 2019ರಲ್ಲಿದ್ದಂತೆ ಬಾಕಿಯಿರುವ ಇಲಾಖಾ ಟಿಪ್ಪಣಿಗಳ ವಿವರಗಳು**
**(ಸಾಮಾನ್ಯ ಮತ್ತು ಸಾಂಖ್ಯಿಕ ಕಂಡಿಕೆಗಳನ್ನು ಹೊರತುಪಡಿಸಿ)**

| ಕ್ರಮ ಸಂಖ್ಯೆ | ಇಲಾಖೆ | 11–12 | 12–13 | 14–15 | 17–18 | ಒಟ್ಟು |
|---|---|---|---|---|---|---|
| 1 | ಶಿಕ್ಷಣ | – | – | – | 4 | 4 |
| 2 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ (ವೈದ್ಯಕೀಯ ಶಿಕ್ಷಣ) | – | – | 1 | – | 1 |
| 3 | ಆರೋಗ್ಯ ಮತ್ತು ಕುಟುಂಬ ಕಲ್ಯಾಣ | – | – | – | 1 | 1 |
| 4 | ವಸಿ | – | – | – | 1 | 1 |
| 5 | ಕನ್ನಡ ಮತ್ತು ಸಂಸ್ಕೃತಿ | – | – | – | 1 | 1 |
| 6 | ಅಲ್ಪಸಂಖ್ಯಾತರ ಕಲ್ಯಾಣ | – | – | – | 2 | 2 |
| 7 | ಕಂದಾಯ | 1 | 2 | – | 1 | 4 |
| **ಒಟ್ಟು** | | **1** | **2** | **1** | **10** | **14** |

ಆಧಾರ: ಪ್ರಧಾನ ಮಹಾಲೇಖಪಾಲರ (ಲೆಕ್ಕಪರಿಶೋಧನೆ–1) ಕಛೇರಿಯಲ್ಲಿ ನಿರ್ವಹಿಸಿರುವ ಸಾರ್ವಜನಿಕ ಲೆಕ್ಕಪತ್ರ ಇಲಾಖಾ ವಾಚ್ ರಿಜಿಸ್ಟರ್‌ಗಳಿಂದ ಪಡೆದುಕೊಂಡ ಮಾಹಿತಿ

### *1.10.3 ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಚರ್ಚೆಯಾಗಬೇಕಿರುವ ಕಂಡಿಕೆಗಳು*

31 ಡಿಸೆಂಬರ್ 2019ರಲ್ಲಿದ್ದಂತೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಚರ್ಚೆಯಾಗಬೇಕಿರುವ ಕಂಡಿಕೆಗಳ ಸ್ಥಿತಿಯ ಸಮೀಕ್ಷೆಯು 80 ಕಂಡಿಕೆಗಳು (ಕಾರ್ಯ ನಿರ್ವಹಣಾ ಲೆಕ್ಕಪರಿಶೋಧನೆ ಮತ್ತು ಸಮೀಕ್ಷೆಗಳನ್ನು ಒಳಗೊಂಡು) ಇನ್ನೂ ಚರ್ಚೆಯಾಗಬೇಕಿರುವುದನ್ನು ತೋರಿಸಿತು. 31 ಡಿಸೆಂಬರ್ 2019ರಲ್ಲಿದ್ದಂತೆ ಸಾರ್ವಜನಿಕ ಲೆಕ್ಕಪತ್ರ ಸಮಿತಿಯಿಂದ ಚರ್ಚೆಗಾಗಿ ಬಾಕಿ ಉಳಿದಿರುವ ಕಂಡಿಕೆಗಳ ವಿವರಗಳನ್ನು (ಸಾಮಾನ್ಯ ಮತ್ತು ಸಾಂಖ್ಯಿಕ ಕಂಡಿಕೆಗಳನ್ನು ಹೊರತುಪಡಿಸಿ) **ಅನುಬಂಧ–1.2**ರಲ್ಲಿ ನೀಡಲಾಗಿದೆ.

## 1.11 ರಾಜ್ಯ ವಿಧಾನಮಂಡಲದಲ್ಲಿ ಸ್ವಾಯತ್ತ ಸಂಸ್ಥೆಗಳ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳ ಮಂಡನೆಯ ಸ್ಥಿತಿ

ನಗರಾಭಿವೃದ್ಧಿ, ವಸತಿ, ಕಾರ್ಮಿಕ ಕಲ್ಯಾಣ ಮತ್ತು ಶಿಕ್ಷಣ ಕ್ಷೇತ್ರಗಳಲ್ಲಿ ಹಲವಾರು ಸ್ವಾಯತ್ತ ಸಂಸ್ಥೆಗಳನ್ನು ಸರ್ಕಾರವು ಸ್ಥಾಪಿಸಿದೆ. ರಾಜ್ಯದ 11 ಸ್ವಾಯತ್ತ ಸಂಸ್ಥೆಗಳ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯನ್ನು ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರಿಗೆ ವಹಿಸಲಾಗಿದೆ. ಲೆಕ್ಕಪರಿಶೋಧನೆಯ ನಿಯೋಜನೆ, ಲೆಕ್ಕಪರಿಶೋಧನೆಗೆ ಲೆಕ್ಕಪತ್ರಗಳನ್ನು ಸಲ್ಲಿಸಿರುವುದು, ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು ಜಾರಿ ಮಾಡಿರುವುದು ಮತ್ತು ವಿಧಾನಮಂಡಲದಲ್ಲಿ ಅವುಗಳ ಮಂಡನೆಯ ಸ್ಥಿತಿಯನ್ನು **ಅನುಬಂಧ–1.3**ರಲ್ಲಿ ನೀಡಲಾಗಿದೆ.

ಮಕ್ಕಳ ಹಕ್ಕುಗಳ ಸಂರಕ್ಷಣೆಗಾಗಿ ಕರ್ನಾಟಕ ರಾಜ್ಯ ಆಯೋಗ (ಜುಲೈ 2009ರಲ್ಲಿ ಸ್ಥಾಪನೆ) ಮತ್ತು ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (ಜುಲೈ 2017 ರಲ್ಲಿ ಸ್ಥಾಪನೆ) ಇವುಗಳು ಸ್ಥಾಪನೆಯಾದಾಗಿನಿಂದ ತಮ್ಮ ವಾರ್ಷಿಕ ಲೆಕ್ಕಪತ್ರಗಳನ್ನು ಇನ್ನೂ ಸಲ್ಲಿಸಬೇಕಿದೆ. ನಾಲ್ಕು ಸ್ವಾಯತ್ತ ಸಂಸ್ಥೆಗಳಿಗೆ ಸಂಬಂಧಿಸಿದಂತೆ ವಾರ್ಷಿಕ ಲೆಕ್ಕಪತ್ರಗಳನ್ನು ಸಲ್ಲಿಸುವಲ್ಲಿ ಒಂದು ವರ್ಷದ ವಿಳಂಬವಿದ್ದಿತು. ಲೆಕ್ಕಪತ್ರಗಳನ್ನು ಅಂತಿಮಗೊಳಿಸುವಿಕೆಯಲ್ಲಿನ ವಿಳಂಬವು ಹಣಕಾಸಿನ ಅಕ್ರಮಗಳು ಪತ್ತೆ ಹಚ್ಚಲಾಗದ ಅಪಾಯವನ್ನು ಹೊಂದಿದೆಯಾದ್ದರಿಂದ ಲೆಕ್ಕಪತ್ರಗಳನ್ನು ಅಂತಿಮಗೊಳಿಸಿ ಶೀಘ್ರವಾಗಿ ಲೆಕ್ಕಪರಿಶೋಧನೆಗೆ ಸಲ್ಲಿಸಬೇಕು.

2006–07ರಿಂದ 2015–16ರವರೆಗೆ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಗೆ ಸಂಬಂಧಿಸಿದ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗಳನ್ನು ರಾಜ್ಯ ವಿಧಾನಸಭೆಯಲ್ಲಿ ಮಂಡಿಸಲಾಗಿಲ್ಲ.

## 1.12 ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಿರುವ ಲೆಕ್ಕಪರಿಶೋಧನಾ ವರದಿಗಳು ಮತ್ತು ಕಂಡಿಕೆಗಳ ವರ್ಷಾವಾರು ವಿವರಗಳು

ಹಿಂದಿನ ಎರಡು ವರ್ಷಗಳ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಿರುವ ಕಾರ್ಯ ನಿರ್ವಹಣಾ ಲೆಕ್ಕಪರಿಶೋಧನೆಗಳು ಮತ್ತು ಕಂಡಿಕೆಗಳ ವರ್ಷಾವಾರು ವಿವರಗಳನ್ನು ಅವುಗಳ ಹಣದ ಮೌಲ್ಯದೊಂದಿಗೆ **ಕೋಷ್ಟಕ–1.6**ರಲ್ಲಿ ನೀಡಲಾಗಿದೆ.

**ಕೋಷ್ಟಕ–1.6: 2016–18ರ ಅವಧಿಯಲ್ಲಿ ಲೆಕ್ಕಪರಿಶೋಧನಾ ವರದಿಗಳಲ್ಲಿ ಸೇರಿಸಿರುವ ಕಾರ್ಯ ನಿರ್ವಹಣಾ ಲೆಕ್ಕಪರಿಶೋಧನೆಗಳು ಮತ್ತು ಕಂಡಿಕೆಗಳ ವಿವರಗಳು**

| ವರ್ಷ | ಕಾರ್ಯ ನಿರ್ವಹಣಾ ಲೆಕ್ಕಪರಿಶೋಧನೆ | | ಕಂಡಿಕೆಗಳು | | ಸ್ವೀಕರಿಸಿದ ಉತ್ತರಗಳು | |
|---|---|---|---|---|---|---|
| | ಸಂಖ್ಯೆ | ಹಣದ ಮೌಲ್ಯ (₹ ಕೋಟಿಗಳಲ್ಲಿ) | ಸಂಖ್ಯೆ | ಹಣದ ಮೌಲ್ಯ (₹ ಕೋಟಿಗಳಲ್ಲಿ) | ಕಾರ್ಯ ನಿರ್ವಹಣಾ ಲೆಕ್ಕಪರಿಶೋಧನೆಗಳು | ಕಂಡಿಕೆಗಳು |
| 2016–17 | 01 | 247.98 | 12 | 50.85 | 01 | 12 |
| 2017–18 | 01 | 265.82 | 12 | 286.37 | 01 | 12 |

ಆಧಾರ: 2016–17 ಮತ್ತು 2017–18ರ ವರ್ಷದ ಲೆಕ್ಕಪರಿಶೋಧನಾ ವರದಿಗಳು

2018–19ರ ಅವಧಿಯಲ್ಲಿ ₹2,809.97 ಕೋಟಿಯನ್ನು ಒಳಗೊಂಡ ಒಂದು ಕಾರ್ಯ ನಿರ್ವಹಣಾ ಲೆಕ್ಕಪರಿಶೋಧನೆ (₹7.01 ಕೋಟಿ) ಮತ್ತು 17 ಕಂಡಿಕೆಗಳನ್ನು (₹2,802.96 ಕೋಟಿಗಳು) ಈ ವರದಿಯಲ್ಲಿ ಸೇರಿಸಲಾಗಿದೆ.